
VK
ವಿಜಯ ಕರ್ನಾಟಕ
VIJAY KARNATAKA
ಅಂತರಾಷ್ಟ್ರೀಯ
Mother Tongue


VK
ವಿಜಯ ಕರ್ನಾಟಕ
VIJAY KARNATAKA




VK
ವಿಜಯ ಕರ್ನಾಟಕ
VIJAY KARNATAKA
ಅಂತರಾಷ್ಟ್ರೀಯ
ಮಾತೃಭಾಷಾ ದಿನಾಚರಣೆ
International Mother Tongue Day

ಆವೃತ್ತಿ: ನಮ್ಮ ತುಮಕೂರು, 22 ಫೆಬ್ರವರಿ 2019, ಪುಟ: 1,

ಅಂತಾರಾಷ್ಟ್ರೀಯ ಮಾತೃಭಾಷಾ ದಿನಾಚರಣೆ

# ಭಾಷೆ ಬಗ್ಗೆ ಮಡಿವಂತಿಕೆ ಬಿಡಿ; ಎಲ್ಲಾ ಭಾಷೆ ಪ್ರೀತಿಸಿ, ಗೌರವಿಸಿ

## ಶ್ರೀ ಸಿದ್ಧಗಂಗಾ ಮಹಿಳಾ ಕಾಲೇಜಿನಲ್ಲಿ ನಡೆದ ಅಂತಾರಾಷ್ಟ್ರೀಯ ಮಾತೃಭಾಷೆ ದಿನಾಚರಣೆಯಲ್ಲಿ ನಟರಾಜ್ ಬೂದಾಳ್ ಅಭಿಮತ

**ವಿಕ ಸುದ್ದಿಲೋಕ** ತುಮಕೂರು

ಭಾಷೆಯ ಬಗ್ಗೆ ಮಡಿವಂತಿಕೆಯನ್ನಿಟ್ಟು ಕೊಳ್ಳದೆ ಎಲ್ಲಾ ಭಾಷೆಯನ್ನೂ ಪ್ರೀತಿಸಿ, ಗೌರವಿಸಬೇಕು. ಆದರೆ, ಕನ್ನಡ ಭಾಷೆಯನ್ನು ಉಳಿಸಿ-ಬೆಳೆಸಬೇಕೆಂದು ಲೇಖಕ ನಟರಾಜ್ ಬೂದಾಳ್ ಅಭಿಪ್ರಾಯಪಟ್ಟರು.

ನಗರದ ಶ್ರೀ ಸಿದ್ಧಗಂಗಾ ಮಹಿಳಾ ಕಾಲೇಜಿನ ಅಕ್ಕಮಹಾದೇವಿ ಸಭಾಂಗಣ ದಲ್ಲಿ ಗುರುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಸಿದ್ಧಗಂಗಾ ಮಹಿಳಾ ಕಾಲೇಜು ಹಾಗೂ ವಿಜಯ ಕರ್ನಾಟಕ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಂತಾ ರಾಷ್ಟ್ರೀಯ ಮಾತೃಭಾಷೆ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣದಿಂದ ಕನ್ನಡ ಭಾಷೆ ಕೆಡು ತ್ತಿದೆ. ಅನ್ಯ ಭಾಷೆಯ ಮಿಶ್ರ ಉಚ್ಚಾರಣೆ ಯಿಂದಾಗಿ ಭಾಷೆ ತನ್ನ ಅಸ್ತಿತ್ವದ ಪದ ಹಾಗೂ ಅರ್ಥವನ್ನು ಕಳೆದುಕೊಳ್ಳುತ್ತಿದೆ ಎಂದು ಹೇಳಿದರು.

**ಜ್ಞಾನವೂ ಕಣ್ಮರೆ:** ಭಾಷಾ ನಿಲುವು ಇತರ ಭಾಷೆಗಳನ್ನು ಹಿಡಿಯಾಗಿ ತಳ್ಳಿಹಾಕುತ್ತಿದೆ. ಅಲ್ಪಸಂಖ್ಯಾತರ ಭಾಷೆ ಇಂದು ವಿನಾಶ ದಂಚಿನಲ್ಲಿವೆ. ಒಂದು ಸಮುದಾಯದ ಭಾಷೆಯನ್ನಾಡುವ ವ್ಯಕ್ತಿ ಮರಣಿಸಿದರೆ, ಆ ಭಾಷೆಯೂ ಅವ ರೊಟ್ಟಿಗೆ ಸಾವನ್ನಪ್ಪುತ್ತದೆ. ಆಗ, ಆ ಭಾಷೆ ಮಾತ್ರ ಸಾಯುವುದಿಲ್ಲ, ಆ ಭಾಷೆಯ ಆಚಾರ-ವಿಚಾರ, ನಡೆ-ನುಡಿ, ಸಮಸ್ತ ಕಸುಬು, ಕೌಶಲ, ಆ ಭಾಷೆಯಲ್ಲಿನ ಅಪಾರ ಜ್ಞಾನವೂ ಕಣ್ಮರೆಯಾಗುತ್ತದೆ. ಮತ್ತೆ ವಾಪಸ್ ತರಲು ಸಾಧ್ಯವಿಲ್ಲ ಎಂದರು.

**ವಿನಾಶದಂಚಿನಲ್ಲಿ:** ಜಗತ್ತಿನಾದ್ಯಂತ 6700 ಭಾಷೆಗಳಲ್ಲಿ 3 ಸಾವಿರ ಭಾಷೆಗಳಲ್ಲಿ ಮಾತನಾಡುವವರ ಸಂಖ್ಯೆ ಹತ್ತು ಸಾವಿರ ಗಡಿ ದಾಟಿಲ್ಲ. ಕೇವಲ ಐದಾರು ಭಾಷೆಗಳನ್ನು ಮಾತ್ರ ಬಹುತೇಕ ಎಲ್ಲರೂ ಮಾತನಾಡುತ್ತಾರೆ. ಹೀಗಾಗಿ ಅಲ್ಪಸಂಖ್ಯಾತರ ಭಾಷೆಗಳು ವಿನಾಶದಂಚಿನಲ್ಲಿವೆ ಎಂದರು.




ತುಮಕೂರು ನಗರದ ಶ್ರೀ ಸಿದ್ಧಗಂಗಾ ಮಹಿಳಾ ಕಾಲೇಜಿನಲ್ಲಿ ಗುರುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಸಿದ್ಧಗಂಗಾ ಮಹಿಳಾ ಕಾಲೇಜು ಹಾಗೂ ವಿಜಯ ಕರ್ನಾಟಕ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಾತೃಭಾಷೆ ದಿನಾಚರಣೆ ಕಾರ್ಯಕ್ರಮವನ್ನು ಲೇಖಕ ನಟರಾಜ್ ಬೂದಾಳ್ ಉದ್ಘಾಟಿಸಿದರು.

ಅಂತಾರಾಷ್ಟ್ರೀಯ ಮಾತೃಭಾಷಾ ದಿನಾಚರಣೆಯನ್ನು ಸರಕಾರದಿಂದ ಆಚರಿಸಬೇಕಾದ ಕೆಲಸವಾಗಬೇಕಿದೆ. ಸರಕಾರದಿಂದ ವರ್ಷದಲ್ಲಿ 32 ಜಯಂತ್ಯುತ್ಸವಗಳನ್ನು ಆಚರಿಸಲಾಗುತ್ತಿದೆ. ಅವುಗಳೆಲ್ಲಾ ಜಾತಿ, ಸಮುದಾಯಗಳಿಗೆ ಸೀಮಿತವಾದ ದಿನಾಚರಣೆಗಳಾಗಿವೆ. ಆದರೆ, ಗಟ್ಟಿಯಾದ ಮಾತೃಭಾಷಾ ದಿನಾಚರಣೆಯನ್ನು ಆಚರಿಸುವ ಅಗತ್ಯತೆಯಿದೆ.



**-ಬಸವರಾಜ್ ಆಪಿನಕಟ್ಟೆ**
ಸಹಾಯಕ ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅಂತಾರಾಷ್ಟ್ರೀಯ ಮಾರುಕಟ್ಟೆ ಪ್ರವೇಶಿಸಿ ಬಾಗಿಲು ಬಳಿ ನಿಂತಿದ್ದೇವೆ. ಆದರೆ ಬಾಗಿಲು ತೆರೆಯದೆ ಒಳಗೆ ಪ್ರವೇಶಿಸಲಾಗುತ್ತಿಲ್ಲ. ಅಂತಾರಾಷ್ಟ್ರೀಯ ಆರ್ಥಿಕತೆಯ ನಿಲುವನ್ನು ಒದಗಿಸಿ ಕೊಟ್ಟಿರುವ ಇಂಗ್ಲಿಷ್‌ನಲ್ಲಿ ವ್ಯವಹರಿಸಿ ದರೆ ಮಾತ್ರ ಬಾಗಿಲು ತೆರೆಯಲಿದೆ. ಅಂತೆಯೇ ನಮ್ಮ ತಾಯಿ ಭಾಷೆಯೂ ಏಕೆ ಅಂತಾರಾಷ್ಟ್ರೀಯ ಆರ್ಥಿಕತೆಯ ನಿಲುವನ್ನು ಒದಗಿಸಿಕೊಡಲು ಸಾಧ್ಯವಾಗಿಲ್ಲ ಎಂದು ಪ್ರಶ್ನಿಸಿದರು.

**ಪ್ರಿಯವಾದ ಭಾಷೆ:** ತಾಯಿಯಿಂದ ಮಗುವಿನ ಎದೆಗೆ ಬಿದ್ದ ಮೊದಲ ಭಾಷೆಯೇ ಮಾತೃ ಭಾಷೆ. ಒಂದು ಮಗು ತನ್ನ 12 ವರ್ಷ ವಯಸ್ಸಿನೊಳಗೆ 6 ಭಾಷೆಯನ್ನು ಕಲಿಯುವ ಸಾಮರ್ಥ್ಯ ಹೊಂದಿದೆ ಎಂದ ಅವರು, ಸಮೂಹದ ಜತೆ ಬದುಕಲಿಕ್ಕೆ ಭಾಷೆ ಮುಖ್ಯವಾಗಿದ್ದು, ತುಮಕೂರು ಜಿಲ್ಲೆಯ ಭಾಷೆ ಅನ್ಯ ಜಿಲ್ಲೆಯ ಜನರಿಗೆ ಪ್ರಿಯವಾದ ಭಾಷೆ ಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

» 13